# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,  ಮೈಸೂರು.

ಎಸ್.ಸಿ ಸಂಖ್ಯೆಃ- 246/2023

| | | |
|---|---|---|
| ಸಾಕ್ಷಿದಾರನ ಹೆಸರು | : ಸಲೀಂ ಅಲಿ | ಪಿ.ಡಬ್ಲ್ಯೂಃ-12 |
| ತಂದೆಯ /ಗಂಡನ ಹೆಸರು | : ಶೌಕತ್ ಅಲಿ | ಸಿ.ಡಬ್ಲ್ಯೂಃ-19 |
| ವಯಸ್ಸು | : 46 ವರ್ಷ | |
| ಉದ್ಯೋಗ | : ಆಟೋ ಚಾಲಕ ಮತ್ತು ಗುಜರಿ ಕೆಲಸ | |
| ವಾಸಸ್ಥಳ | : ಕಾಮನಕೆರೆ ಹುಂಡಿ. | |

**ಸಾಕ್ಷಿಯನ್ನು ಈ ದಿನ ದಿಃ 27.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನ್ನ ಬಳಿ ಆಟೋ ಇತ್ತು. ಅದರ ನಂಬರ್ ನನಗೆ ಸರಿಯಾಗಿ ನೆನಪಿರುವುದಿಲ್ಲ. ಆದರೆ 5019 ಎಂದು ಇತ್ತು. ಪೂರ್ಣ ನಂಬರ್ ನೆನಪಿರುವುದಿಲ್ಲ. ನಾನು ಸದರಿ ಆಟೋವನ್ನು ಚಾ.ಸಾಃ18 ಇರ್ಫಾನ್ ರವರಿಂದ ರೂ.23,000 ಗಳಿಗೆ ಖರೀದಿ ಮಾಡಿರುತ್ತೇನೆ.  ನಾನು ಆಟೋವನ್ನು ಖರೀದಿಸಿದಾಗ ಸದರಿ ಆಟೋ ದಾಖಲೆಗಳು ಅಜ್ಜಿಯ ಹೆಸರಿನಲ್ಲಿದ್ದವು. ಅವರ ಹೆಸರು ನನಗೆ ತಿಳಿದಿರುವುದಿಲ್ಲ. ನಾನು ಒಂದು ವರೆ ವರ್ಷ ಸದರಿ ಆಟೋವನ್ನು ಓಡಿಸಿ ನಂತರ 10,300 ರೂ.ಗೆ ಮಾರಾಟ ಮಾಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ತೋರಿಸಿ ಅವರಿಗೆ ಮಾರಾಟ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ದಾಖಲೆ

ಯನ್ನು ತೋರಿಸಿ ಸಹಿಯನ್ನು ಗುರುತಿಸಲು ಹೇಳಿದಾಗ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಡೆಲಿವರಿ ನೋಟ್ ಆಗಿದ್ದು, ಅದನ್ನು ನಿಶಾನೆ ಪಿ–19 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–19(ಎ) ಎಂದು ಗುರುತಿಸಲಾಯಿತು.

2. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಸಹಿಯನ್ನು ಗುರುತಿಸಲು ಹೇಳಿದಾಗ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಡ್ವಾನ್ಸ ಸೇಲ್ ರೆಸಿಟ್ ಆಗಿದ್ದು, ಅದನ್ನು ನಿಶಾನೆ ಪಿ–20 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–20(ಎ) ಎಂದು ಗುರುತಿಸಲಾಯಿತು.

3. ನಂತರ 2 ವರೆ ವರ್ಷಗಳ ಬಳಿಕ ಮಂಡಿ ಪೊಲೀಸ್ ಠಾಣೆಯಿಂದ ನನಗೆ ಪೋನ್ ಕರೆ ಬಂದಿದ್ದು, ನನಗೆ ಠಾಣೆಗೆ ಬರಲು ತಿಳಿಸಿದ್ದರು. ನಾನು ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಪೊಲೀಸರು ನನಗೆ ನನ್ನ ಆಟೋವನ್ನು ಮಾರಾಟ ಮಾಡಿದ್ದರ ಬಗ್ಗೆ ವಿಚಾರಿಸಿದ್ದು, ಸದರಿ ಆಟೋವನ್ನು ಖರೀದಿಸಿದವರು ಕಳ್ಳತನ ಮಾಡಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ನನಗೆ ತಿಳಿಸಿದರು. ನಾನು ಸದರಿ ಆಟೋವನ್ನು ಆಗಲೇ ಮಾರಾಟ ಮಾಡಿರುತ್ತೇನೆ. ಸದರಿ ಆಟೋಗೆ ಮತ್ತು ನನಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದು ನಾನು ಪೊಲೀಸರಿಗೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

4. ನಾನು ಆಟೋವನ್ನು ಚಾ.ಸಾಃ18 ಇರ್ಫಾನ್ ಪಾಷರವರಿಂದ ಖರೀದಿಸಿರುತ್ತೇನೆ. ಸದರಿ ಮಾರಾಟ ಮಾಡಲು ಡೆಲಿವರಿ ನೋಟ್ ಬರೆಯಲಾಗಿರುತ್ತದೆ ಎಂದು ಹೇಳಿದ್ದು, ಸದರಿ ದಾಖಲೆಯಲ್ಲಿ ಯಾವಾಗ?

ಯಾರಿಂದ ಮತ್ತು ಎಷ್ಟು ಮೊತ್ತಕ್ಕೆ ಖರೀದಿಸಲಾಗಿತ್ತು ಎಂಬುದರ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ನಿಶಾನೆ ಪಿ–20ರ ಪ್ರಕಾರ ಸದರಿ ಆಟೋವನ್ನು 1ನೇ ಆರೋಪಿಗೆ ಮಾರಾಟ ಮಾಡಿರುತ್ತೇನೆ ಎಂದು ಹೇಳಲಾದ ದಾಖಲೆಯಲ್ಲಿ 23,000 ರೂ. ಮೊತ್ತವನ್ನು ನಮೂದಿಸಲಾಗಿರುತ್ತದೆ ಇದರ ಬಗ್ಗೆ ತಿಳಿದಿರುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಇರ್ಫಾನ್ ಪಾಷರವರಿಂದ ಆಟೋವನ್ನು ಖರೀದಿಸಿರುವುದಿಲ್ಲ ಮತ್ತು ಯಾವುದೇ ಡೆಲಿವರಿ ನೋಟಿಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಗೆ ಆಟೋವನ್ನು 10,300 ರೂ.ಗೆ ಮಾರಾಟ ಮಾಡಿರುವುದಿಲ್ಲ ಮತ್ತು ಅಡ್ವಾನ್ಸ ರಶೀದಿಗೆ ಸಹಿ ಕೂಡ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

6. ನಾನು ಆಟೋವನ್ನು ಓಡಿಸುತ್ತೇನೆ. ನಿಮಗೆ ವಾಹನ ಚಾಲನ ಪರವಾನಗಿ ಇರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ವಾಹನವನ್ನು ಖರೀದಿಸಿರುತ್ತೇನೆ ಎಂದು ಹೇಳಲಾದ ಆಟೋ ಇರ್ಫಾನ್ ಪಾಷರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ವಾಹನಕ್ಕೆ ಸಂಬಂಧಪಟ್ಟಂತೆ ಇರ್ಫಾನ್ ಪಾಷರವರ ಬಳಿ ಅವರ ಹೆಸರಿನಲ್ಲಿ ಯಾವುದೇ ದಾಖಲೆ ಇರಲಿಲ್ಲ ಎಂದರೆ ಸರಿ. ಸದರಿ ಆಟೋಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆ ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ.

**7. ನಾನು ಇರ್ಫಾನ್ ಪಾಷನಿಂದ ಆಟೋವನ್ನು ಖರೀದಿಸಿರುವುದಿಲ್ಲ, ಅದನ್ನು ಒಂದುವರೆ ವರ್ಷ ಓಡಿಸಿರುವುದಿಲ್ಲ, ನಂತರ 1 ನೇ ಆರೋಪಿಗೆ ಮಾರಾಟ ಮಾಡಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

ಮರುವಿಚಾರಣೆಃ**– ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.**